**ಓ ಎಸ್ 99/2023 ಪಿಡಬ್ಲ್ಯೂ.1**

**ಸಾಕ್ಷಿಯನ್ನು ದಿಃ 09.10.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಸಹಾಯಕ ಸರ್ಕಾರಿ ವಕೀಲರಿಂದಃ**

ವ್ಯವಸಾಯವನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ಕೆಲಸವನ್ನು ಮಾಡುವುದಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಜಮೀನು ಇಲ್ಲ. ಭೂ ರಹಿತರಿಗೆ ಜಮೀನು ಮಂಜೂರು ಮಾಡುವ ಯೋಜನೆಯಡಿ ದಾವಾ ಆಸ್ತಿಯು ನನಗೆ ಮಂಜೂರು ಆಗಿದೆ.

ಈ ದಾವೆ ಹೂಡುವ ಕಾಲಕ್ಕೆ ನಾನು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿ ಇದ್ದೆ. ನಾನು ಸ್ವಾಧೀನಾನುಭವವನ್ನು ಹೊಂದಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಗ್ರ್ಯಾಂಟ್ ಸರ್ಟಫಿಕೇಟ್, ಖಾತಾ, ಬ್ಯಾಂಕ್ ಚಲನ್, ಆರ್ ಟಿ ಸಿ, ಸರ್ಕಾರಿ ಸುತ್ತೋಲೆ ಇತ್ಯಾದಿ ಹಾಜರುಪಡಿಸಿದ್ದೇನೆ. 2022-23 ನೇ ಸಾಲಿನ ಆರ್ ಟಿ ಸಿ ಯನ್ನು ಹಾಜರುಪಡಿಸಿಲ್ಲ. ಅರಣ್ಯ ಇಲಾಖೆಯವರು ನನ್ನ ವಿರುದ್ಧ ಕೇಸು ದಾಖಲಿಸಿದ್ದಾರೆ ಎಂದರೆ ಅವರು ಪದೆ ಪದೇ ದಾವಾ ಆಸ್ತಿಗೆ ಬಂದು ನನಗೆ ತೊಂದರೆ ನೀಡುತ್ತಿದ್ದ ಕಾರಣ ನಾನೇ ಕೇಸು ಹಾಕಿದ್ದೇನೆ. ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ ಎಂದರೆ ಸರಿಯಲ್ಲ. ಕ್ರಿಮಿನಲ್ ಮೊಕದ್ದಮೆ ದಾಖಲಾದ ನಂತರ ನಾನು ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ. 79 ರಲ್ಲಿನ ಸುಮಾರು 300 ಎಕರೆ ಜಮೀನು ಸರ್ಕಾರಿ ಜಮೀನು ಎಂದರೆ ಸರಿ. ಈಗ ನನಗೆ ತೋರಿಸಿದ ಆರ್ ಟಿ ಸಿ ಯು ಸರ್ವೆ ನಂ. 79 ಕ್ಕೆ ಸಂಬಂಧಿಸಿದ ಆರ್ ಟಿ ಸಿ ಆಗಿದೆ ಎಂದರೆ ಸರಿ. ಸಾಕ್ಷಿಯು ಒಪ್ಪಿದ್ದರಿಂದ ಅದನ್ನು ನಿಶಾನೆ ಡಿ 1 ಎಂದು ಗುರುತಿಸಲಾಯಿತು. ನನಗೆ ಮಂಜೂರು ಮಾಡಿರುವ ಜಮೀನಿಗೆ ಸಂಬಂಧಿಸಿದ ಸ್ಕೆಚ್ ನ್ನು ನೀಡಿದ್ದಾರೆ. ಆ ಸ್ಕೆಚ್ ನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಸ್ಕೆಚ್ ಸರ್ಕಾರ ನೀಡಿರುವ ಸ್ಕೆಚ್ ಆಗಿರದೆ ನಾನೇ ತಯಾರು ಮಾಡಿಸಿಕೊಂಡಿರುವ ಸ್ಕೆಚ್ ಆಗಿದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಶಾನೆ ಪಿ 2 ರಲ್ಲಿನ ಸ್ಕೆಚ್ ನಲ್ಲಿ ದಿನಾಂಕ ಸರಿಯಾಗಿ ಕಾಣುತ್ತಿಲ್ಲ. ತಹಶೀಲ್ದಾರ್ ರು ನನಗೆ ಜಮೀನನ್ನು ಮಂಜೂರು ಮಾಡಿದಿದ್ದರೆ 300 ಎಕರೆ ಜಮೀನಿನ ಪೈಕಿ ಯಾವ ಸ್ಥಳದಲ್ಲಿ ನನಗೆ ಮಂಜೂರು ಆಗಿರುವ ಜಮೀನು ಇದೆ ಎಂಬ ಬಗ್ಗೆ ತಹಶೀಲ್ದಾರ್ ರವರು ಸ್ಕೆಚ್ ನ್ನು ನೀಡುತ್ತಿದ್ದರು ಮತ್ತು ಅಂತಹ ಸ್ಕೆಚ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

ನನಗೆ 3 ಜನ ಮಕ್ಕಳು. ಆ ಪೈಕಿ ಇಬ್ಬರು ಗಂಡು ಮಕ್ಕಳು ಮತ್ತು ಒಂದು ಹೆಣ್ಣು ಮಗು. ಅವರ ಹೆಸರುಗಳು ಸಂತೋಷ, ಸಂಜಯ ಮತ್ತು ಸಹನ. ಈಗ ನನಗೆ ತೋರಿಸಿದ ಆರ್ ಟಿ ಸಿ ನನ್ನದೆ ಆಗಿದೆ. ಸಾಕ್ಷಿಯು ಒಪ್ಪಿದ್ದರಿಂದ ಆರ್ ಟಿ ಸಿ ಯನ್ನು ನಿಶಾನೆ ಡಿ 2 ಎಂದು ಗುರುತಿಸಲಾಯಿತು. ಸದರಿ ಆರ್ ಟಿ ಸಿ ಯಲ್ಲಿ ಇರುವ ಲೀಲಾವತಿ ಎಂಬುವವರು ನನ್ನ ಹೆಂಡತಿ. ಈಗ ನನಗೆ ತೋರಿಸಿದ ಎರಡು ಆರ್ ಟಿ ಸಿಗಳು ನನ್ನ ಮಗ ಸಂತೋಷ್‌ನ ಹೆಸರಿನಲ್ಲಿದೆ. ಸಾಕ್ಷಿಯು ಒಪ್ಪಿದ್ದರಿಂದ ಆರ್ ಟಿ ಸಿ ಗಳನ್ನು ನಿಶಾನೆ ಡಿ 3 ಮತ್ತು 4 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಎರಡು ಆರ್ ಟಿ ಸಿಗಳು ನನ್ನ ಮಗ ಸಂಜಯನ ಹೆಸರಿನಲ್ಲಿದೆ. ಸಾಕ್ಷಿಯು ಒಪ್ಪಿದ್ದರಿಂದ ಆರ್ ಟಿ ಸಿ ಗಳನ್ನು ನಿಶಾನೆ ಡಿ 5 ಮತ್ತು 6 ಎಂದು ಗುರುತಿಸಲಾಯಿತು. ಈ ದಾವೆ ಹೂಡುವ 2-3 ತಿಂಗಳ ಹಿಂದೆ ನನ್ನ ಹೆಂಡತಿ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದೇನೆ ಎಂದರೆ ಅವರಿಗೆ ಭಾಗ ಕೊಡಬೇಕಾಗಿತ್ತು ಅದಕ್ಕೆ ಮಾಡಿಕೊಟ್ಟಿದ್ದೇನೆ. ವಿಭಾಗ ಆಗುವುದಕ್ಕಿಂತ ಮೊದಲು ಆ ಆರ್ ಟಿ ಸಿ ಗಳು ನನ್ನ ಹೆಸರಿನಲ್ಲಿ ಇದ್ದವು ಎಂದರೆ ನನ್ನ ತಂದೆಯ ಹೆಸರಿನಿಂದ ನನಗೆ ಬಂದು ನಾನು ನನ್ನ ಹೆಂಡತಿ ಮಕ್ಕಳಿಗೆ ಭಾಗ ಮಾಡಿಕೊಟ್ಟಿದ್ದೇನೆ.

ಸರ್ವೆ ನಂ. 79 ರಲ್ಲಿ 308 ಎಕರೆ ಜಮೀನನ್ನು ಅರಣ್ಯ ಇಲಾಖೆಗೆ ದಿನಾಂಕ 31.10.1995 ರಂದು ಸರ್ಕಾರವು ನೀಡಿದ್ದು ಅಂದಿನಿಂದಲೂ ಅರಣ್ಯ ಇಲಾಖೆ ಅದರ ಸ್ವಾಧೀನಾನುಭವವನ್ನು ಹೊಂದಿದ್ದರೂ ಸಹ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಗೆ ಮಂಜೂರಾದ ದಿನಾಂಕದಿಂದಲೂ ಅರಣ್ಯ ಇಲಾಖೆಯವರೇ ಅದರಲ್ಲಿ ಮರ ಗಿಡಗಳನ್ನು ಬೆಳೆಸಿ ಸ್ವಾಧೀನಾನುಭವ ಹೊಂದಿದ್ದರೂ ಸಹ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅವರಿಗೆ ತೊಂದರೆ ನೀಡಿದ ಕಾರಣ ಅರಣ್ಯ ಇಲಾಖೆಯವರು ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಎಂದೂ ಸಹ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವ ಹೊಂದಿರದೆ ಇದ್ದರೂ ಸಹ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**